ಎನ್ನುವುದು ನನ್ನ ಅಭಿಪ್ರಾಯವೂ ಹೌದು ಮತ್ತು ಇದು ವಾಸ್ತವವೂ ಹೌದು. ಕರ್ನಾಟಕ ರಾಜ್ಯದ ಜನತೆ ಇಂದು ಮನೆಗಳಲ್ಲಿ ನಿಶ್ಚಿಂತೆಯಿಂದ ಮಲಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿ ದಿನ ಪತ್ರಿಕೆಗಳಲ್ಲಿ ಕೊಲೆ, ದರೋಡೆ ಮತ್ತು ಲೂಟಿಯ ವಿಚಾರಗಳೇ ಪ್ರಕಟವಾಗುತ್ತಿದೆ. ಇದಲ್ಲದೇ ಡಕಾಯಿತರ ಹಾವಳಿ ಕೂಡ ಜಾಸ್ತಿಯಾಗುತ್ತಿರುವ ಬಗ್ಗೆ ಸುದ್ದಿಗಳು ಬರುತ್ತಿವೆ. ಹೀಗಾಗಿ ಜನರಿಗೆ ಈ ರಾಜ್ಯದಲ್ಲಿ ಯಾವುದೇ ರೀತಿಯಾದಂಥ ರಕ್ಷಣೆಯಿಲ್ಲ. ಮೊನ್ನೆ ಶಾಸಕರಾದ ಮಾದಪ್ಪನವರ ಮನೆ ಮೇಲೆ ಧಾಳಿಯಾಗಿರುವ ಬಗ್ಗೆ ಸದನದಲ್ಲಿ ಈಗಾಗಲೇ ಚರ್ಚೆಯಾಗಿದೆ. ಅದನ್ನು ಮತ್ತೆ ಹೇಳುವ ಅವಶ್ಯಕತೆಯಿಲ್ಲ. ಅಂದರೆ ಇಂದು ಶಾಸಕರಿಗೆ ಮತ್ತು ಸಾಮಾನ್ಯ ಜನರಿಗೆ ರಕ್ಷಣೆ ಸಿಗದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಉದ್ಭವವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಇದಕ್ಕೆ ಬೇಕಾದರೆ ನಾವು ಸಾವಿರ ಸಾವಿರಗಟ್ಟಲೆ ಉದಾಹರಣೆಗಳನ್ನು ಕೊಡಬಹುದು. ಅಧ್ಯಕ್ಷರೆ, ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುವ ಒಂದು ವಿಚಾರವೆಂದರೆ x x x x

ಅಧ್ಯಕ್ಷರು : ರೆಡ್ಡಿಯವರೆ, ಉತ್ತರ ಪ್ರದೇಶದ ಅಸೆಂಬ್ಲಿಯವರು ಇಲ್ಲಿ ಯಾರೂ ಇಲ್ಲ. ಅದೂ ಅಲ್ಲದೇ ಅದನ್ನು ಇಲ್ಲಿ ಹೇಳುವುದು ಸೂಕ್ತವಲ್ಲ. ಹೀಗಿರುವಾಗ ನೀವೇಕೆ ಅದನ್ನು ಹೇಳುತ್ತೀರಿ. ದಯವಿಟ್ಟು ಅದನ್ನು ಹೇಳಬೇಡಿ. ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಉತ್ತರ ಪ್ರದೇಶ ರಾಜ್ಯದ ಬಗ್ಗೆ ಹೇಳುತ್ತಿಲ್ಲ. ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಹೇಗಿದೆ ಎಂಬುದನ್ನು ಹೇಳುತ್ತಿದ್ದೇನೆ. ಹಾಗಾಗಿ ನಾವು ಕಾನೂನು ವ್ಯವಸ್ಥೆಯ ಪರಿಸ್ಥಿತಿ ಬಗ್ಗೆ ನಾವು ಒಂದು ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಎಲ್ಲವನ್ನೂ ಕೂಡ ಸಮಗ್ರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇವರು ಕೂಡ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಿಲ್ಲ. ಆದುದರಿಂದ ಅವರ ಬಗ್ಗೆ ಟೀಕೆ ಮಾಡತಕ್ಕಂಥ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ನಮ್ಮ ನಿಲುವೇನು? ನಾವು ಏನನ್ನು ಹೇಳಬೇಕು ಎಂಬುದೇ ಪ್ರಶ್ನೆ ಬಂದಿರತಕ್ಕಂಥದ್ದು. ಇಡೀ ಕರ್ನಾಟಕ ರಾಜ್ಯದಲ್ಲಿ ಇಂದು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ.

ಅಧ್ಯಕ್ಷರು : ಒಂದ್ನಿಮಿಷ ರೆಡ್ಡಿಯವರೇ ಈಲ್ಡ್ ಆಗಿ, ಸುರೇಶ್ ಕುಮಾರ್‌ರವರು ನನ್ನ ಛೇಂಬರ್‌ಗೆ ಬಂದು ಕ್ರೈಮ್ ವಿಷಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ಮಹತ್ವವುಳ್ಳ ವಿಷಯವನ್ನು ಸದನದಲ್ಲಿ ಹೇಳಲು ಅನುಮತಿಯನ್ನು ಕೇಳಿದ್ದರು. ನಾನು ಅವರಿಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ. ಆದುದರಿಂದ ತಾವು ಒಂದ್ನಿಮಿಷ ಈಲ್ಡ್ ಆಗಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಮೈಸೂರು ರಸ್ತೆಯಲ್ಲಿರುವ "ದಿ ಕ್ಲಬ್" ಬಗ್ಗೆ

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಆಗುತ್ತಿರುವಂಥ ಕ್ರೈಮ್ ಬಗ್ಗೆ ಪ್ರಸ್ತಾಪ

x x x x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಮಾಡುತ್ತಿರುವಂಥ ಸಂದರ್ಭದಲ್ಲಿ ನಾನು ಅದಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ಈ ಸಮಯದಲ್ಲಿ ಒಂದು ವಿಚಾರವನ್ನು ತಮ್ಮ ಅನುಮತಿ ಪಡೆದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ವಿಚಾರ ಹಿರಿಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರ ಗಮನಕ್ಕೂ ಬಂದಿದೆ.

MR. SPEAKER : I would request Mr. Prakash, Hon'ble Minister for Rural Development, to kindly make a note of it. I think you will have to make a statement immediately on this. It is a serious matter which they have brought to my notice.

ಶ್ರೀ ಎಸ್. ಸುರೇಶ್ ಕುಮಾರ್ : ಬೆಂಗಳೂರಿನಲ್ಲಿ ಆಗುತ್ತಿರುವ ಅಪರಾಧಗಳಿಗೆ ಅನೇಕ ಕಾರಣಗಳಿವೆ. ಅದರಲ್ಲಿ ಬಹಳ ಮುಖ್ಯವಾದ ಕಾರಣವೆಂದರೆ ಬೆಂಗಳೂರಿನ ಸುತ್ತಮುತ್ತ ಕೆಲವು ಪ್ರಸಿದ್ಧ ಹಾಗೂ ಪ್ರಭಾವಶಾಲಿ ವ್ಯಕ್ತಿಗಳ ಸಂಪರ್ಕದಿಂದ ನಡೆಯುತ್ತಿರುವ ಕ್ಲಬ್‌ಗಳು ಮತ್ತು ರೆಸಾರ್ಟ್ಸ್‌ಗಳು. ನನ್ನ ಮುಂದೆ ಈಗ ಇವೊತ್ತಿನ "ಏಶಿಯನ್ ಏಜ್" ಪತ್ರಿಕೆ ಇದೆ. ಅದರಲ್ಲಿ ಒಂದು ಜಾಹಿರಾತು ಬಂದಿದೆ. ಮೈಸೂರು ರಸ್ತೆಯಲ್ಲಿ "ದಿ ಕ್ಲಬ್" ಎನ್ನುವ ಒಂದು ಕ್ಲಬ್ ಇದೆ, ಅದರ ಮಾಲೀಕನ ಹೆಸರು ನಾಸರ್ ಎಂಬುದಾಗಿದೆ. ಇದಲ್ಲದೇ ಇನ್ನೊಂದು ಯು.ಎಫ್.ಒ. ಎನ್ನುವ ಕ್ಲಬ್ ಇದೆ. ಇವರುಗಳು ಏನು ಮಾಡುತ್ತಿದ್ದಾರೆಂದರೆ, ಬೆಂಗಳೂರಿನಲ್ಲಿ ಒಂದು ರೀಚ್ ಫೌಂಡೇಷನ್ ಎಂದು ಒಂದಿದೆ, ಆ ರೀಚ್ ಫೌಂಡೇಷನ್ ಒಬ್ಬ ಪ್ರಮುಖ ರಾಜಕಾರಣಿಯ ಫೌಂಡೇಷನ್ ಆಗಿದೆ. ನಾನು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆತ ಆ ರೀಚ್ ಫೌಂಡೇಷನ್ ಕಾರ್ಯದರ್ಶಿ. ಈ ರಕ್ಷಣೆಯನ್ನು ತೆಗೆದು ದಿನಾಂಕ 6.11.98ರ ರಾತ್ರಿ. ಹ್ಯಾಲೋವಿನ್ ಎಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಜಾಹಿರಾತಿನಲ್ಲಿ ಏನು ಹೇಳಿದ್ದಾರೆಂದರೆ "Grand night for untamed spirit - couples only" ಇದಕ್ಕೆ ಪ್ರವೇಶಾವಕಾಶ ಕೇವಲ ಕಪಲ್ಸ್ ಗಳಿಗೆ ಮಾತ್ರವೆಂದಿದ್ದಾರೆ. ಅಂದರೆ ಬೇರೆ ಯಾರಿಗೂ ಪ್ರವೇಶವಿಲ್ಲ. ಅಲ್ಲಿ ಈ ಕಪಲ್ಸ್ ಗಳು ಹೋದಮೇಲೆ ಮುಖವಾಡ ಹಾಕಿಕೊಂಡು ಪ್ರೇತದ ನೃತ್ಯವನ್ನು ಮಾಡುವುದು. ಇದರ ಜೊತೆಗೆ wife's swapping, ಎಂದು ನಾವು ಏನು ಕೇಳಿದ್ದೇವೆ ಆ ಪ್ರಕಾರ ಯಾರ ಹೆಣ್ಣನ್ನು ಯಾರು ಬೇಕಾದರೂ ಎಳೆದು ನೃತ್ಯ ಮಾಡುವ ದುಷ್ಕೃತ್ಯ ಪೋಲೀಸ್‌ನವರ ಪೂರ್ಣ ಸಹಕಾರದಿಂದ, ಪೋಲೀಸಿನವರ ರಕ್ಷಣೆಯಲ್ಲಿ ಇವೊತ್ತು ಬೆಂಗಳೂರು ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಇದು ಯು.ಎಫ್.ಒ., ಡೊಮೆನಿಯನ್ ಮತ್ತು ದಿ ಕ್ಲಬ್ ಎಂಬ ಮೂರು ಕ್ಲಬ್‌ಗಳಲ್ಲಿ ನಡೆಯುತ್ತಿದೆ. ಈ ಕ್ಲಬ್ ಗಳಲ್ಲಿ ನಗರದ ಹಿರಿಯ ಪೋಲೀಸ್ ಅಧಿಕಾರಿಗಳು ಗೌರವ ಸದಸ್ಯರುಗಳಾಗಿದ್ದಾರೆ. ಇವರುಗಳು ಈ ಕ್ಲಬ್‌ಗಳಲ್ಲಿ ರಾತ್ರಿ 11ಗಂಟೆ ಆದಮೇಲೆ ಮದ್ಯದ ಸರಬರಾಜು ಆಗಬಾರದು. ಹಿರಿಯ ಸಚಿವರಾದ ಮಂಜುನಾಥ್‌ರವರಿಗೂ ಇದು ಗೊತ್ತು. ಆಕಸ್ಮಾತ್ ಒಂದು ರಾತ್ರಿ ಸರಬರಾಜು ಮಾಡಬೇಕಾದರೆ ಅದಕ್ಕೆ ವಿಶೇಷ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಪೋಲೀಸ್ ಅಧಿಕಾರಿಗಳ ರಕ್ಷಣೆಯಲ್ಲಿ ನಡೆಯುತ್ತಿರುವ, ಗೃಹ ಇಲಾಖೆಯ ರಕ್ಷಣೆಯಲ್ಲಿ ನಡೆಯುತ್ತಿರುವ ಕ್ಲಬ್‌ಗಳಲ್ಲಿ ಇದು ಅವ್ಯಾಹತವಾಗಿ ಪ್ರತಿ ವಾರ ಇಂಥ ಕಾರ್ಯಕ್ರಮಗಳು ನಡೆಯುತ್ತಿವೆ. ಮದ್ಯದ ಹೊಳೆ

ಹರಿಯುತ್ತಿದೆ. ಇದೇ ಅಬ್ಕಾರಿ ಕಾಯಿದೆ ಪ್ರಕಾರ ಮದ್ಯ ಮಾರುವ ಜಾಗದಲ್ಲಿ ಹೆಂಗಸರಿಗೆ ಉದ್ಯೋಗವನ್ನು ಕೊಡಬಾರದು. ಆದರೆ ಆ ಕ್ಲಬ್ ಗಳಲ್ಲಿ ಸಿಂಗರ್ಸ್, ಅನೌನ್ಸರ್ಸ್ ಮತ್ತು ಡ್ಯಾನ್ಸರ್‌ಗಳನ್ನು ಕಾಂಟ್ರಾಕ್ಟ್ ಮೇಲೆ ತೆಗೆದುಕೊಂಡು ರಾತ್ರಿಯಿಡೀ ನಗ್ನವಾಗಿ ನೃತ್ಯವನ್ನು ಮಾಡಿಸುತ್ತಿದ್ದಾರೆ. ಪ್ರತಿಷ್ಠಿತ ಕುಟುಂಬಗಳ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ಏನೇನು ಮಾಡುತ್ತಾರೆ ಎಂಬುದನ್ನು ನೀವು ವಿಚಾರಣೆ ಮಾಡಿಸಿದರೆ ಗೊತ್ತಾಗುತ್ತದೆ. ಮನ ನೊಂದು ನಾನು ಇದನ್ನು ಹೇಳುತ್ತಿದ್ದೇನೆ. ರಾತ್ರಿಯಿಡೀ ಸ್ವಿಮ್ಮಿಂಗ್ ಪೂಲ್‌ನಲ್ಲಿ, ಕಾರಂಜಿಗಳ ಕೆಳಗಡೆ 'ರೇನ್ ಡ್ಯಾನ್ಸ್' ಎಂದು ಮಾಡಿಸುತ್ತಾರೆ. ನಮ್ಮ ಹೆಣ್ಣುಮಕ್ಕಳನ್ನು ಇಂಥದ್ದಕ್ಕೆ ಉಪಯೋಗಿಸಿಕೊಂಡು "ಎಂ.ಟಿ.ವಿ." ಮತ್ತು "ವಿ. ಚಾನಲ್"ನಲ್ಲಿ ಪ್ರದರ್ಶಿಸುವುದಕ್ಕೆ ಇಲ್ಲಿ ಶೂಟಿಂಗ್ ಮಾಡುತ್ತಾರಂತೆ. ಈ ರೀತಿಯಲ್ಲಿ ಪ್ರದರ್ಶನ ಮಾಡುವುದಕ್ಕೆ ನೀವು ಈ ಕ್ಲಬ್‌ಗಳಿಗೆ ಅವಕಾಶ ಕೊಟ್ಟಿದ್ದೀರೇನು? ಇನ್ನು ಕ್ರೈಮ್ ವಿಚಾರದಲ್ಲಿ ಅತಿ ಮುಖ್ಯವಾದ ಸಂಗತಿಯೆಂದರೆ ಈ ಕ್ಲಬ್‌ಗಳಲ್ಲಿ ಡ್ರಗ್ಸ್‌ಗಳಾದ ಮರಿಜುವಾನ್, ಹೆರಾಯಿನ್ ಆಸಿಡ್ ಮತ್ತು ಹ್ಯಾಶಾಯಿಲ್‌ಗಳು ಬಹಳ ಸುಲಭವಾಗಿ ಲಭ್ಯವಿದ್ದು ಬಹಳ ಸುಲಭವಾಗಿ ಉಪಯೋಗಿಸುತ್ತಾರೆ. ಸರ್ಕಾರದ ಗಮನಕ್ಕೆ ಈ ವಿಚಾರ ಬಂದಿಲ್ಲವೆ? ಶ್ರೀರಾಮರೆಡ್ಡಿಯವರು ಕ್ರೈಮ್ ಬಗ್ಗೆ ನೋ ಕಾನ್‌ಫಿಡೆನ್ಸ್ ಮೋಷನ್‌ನಲ್ಲಿ ಮಾತನಾಡುತ್ತಿರುವಂಥ ಈ ಸಂದರ್ಭದಲ್ಲಿ ನಾನು ಈ ವಿಚಾರಗಳನ್ನು ಹೇಳಬೇಕಾಗಿ ಬಂತು. ಬೆಂಗಳೂರು ನಗರ ರಾಜ್ಯದ ರಾಜಧಾನಿ, ಗೃಹ ಸಚಿವರು ಇರುವಂಥ ಜಾಗ, ಇದರ ಜೊತೆಗೆ ಪೋಲೀಸ್ ಕಮಿಶನರ್, ಬಹಳ ದೊಡ್ಡ ವ್ಯವಸ್ಥೆ. ಇವರ ಆಶ್ರಯದಲ್ಲಿ, ಗೌರವ ಸದಸ್ಯತ್ವದಲ್ಲಿ ಇದು ನಡೆಯುತ್ತಿದೆ, ಇದು ಇರಬೇಕೇ? "ದಿ ಕ್ಲಬ್" ನಲ್ಲಿ 'ಇನ್ ಫರ್ನೋ' ಎಂಬುದು ಹಾಲ್. ಇದು ಡಿಸ್ಕೋಡೆಕ್ ಡ್ಯಾನ್ಸಿಂಗ್ ಹಾಲ್. ಇದಕ್ಕೆ ಸುಮಾರು ಒಂದು ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಪ್ರತಿ ರಾತ್ರಿ ಇಲ್ಲಿಯ ಕಲೆಕ್ಷನ್ ಎಷ್ಟೆಂದರೆ ಸುಮಾರು 14 ರಿಂದ 15 ಲಕ್ಷ ರೂ.ಗಳು. ಪ್ರತಿ ನೈಟ್‌ನಲ್ಲೂ 14-15 ಲಕ್ಷ ರೂಪಾಯಿಗಳ ಕಲೆಕ್ಷನ್ ಆಗುತ್ತದೆ. ಅದಕ್ಕೋಸ್ಕರ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಾ ಈ ನವೆಂಬರ್ 6ನೇ ತಾರೀಖಿನಂದು ನಡೆಯುವ ಹ್ಯಾಲೋವಿನ ಎನ್ನುವಂತಹ ನೃತ್ಯಕ್ಕೆ ನೀವು ಕಡಿವಾಣವನ್ನು ಹಾಕುತ್ತೀರಾ? ಕಡಿವಾಣ ಹಾಕುವಂತಹ ಇಚ್ಛಾಸಕ್ತಿ ನಿಮಗೆ ಇದೆಯಾ? ನಾನು ಇಷ್ಟೆಲ್ಲಾ ವಿಷಯಗಳನ್ನು ಸದನದ ಗಮನಕ್ಕೆ ತಂದಿದ್ದೇನೆ. ಇದು ಯಾವುದೇ ರೀತಿಯ ಮಾದಕ ದ್ರವ್ಯವಿರಬಹುದು ಅಥವಾ ಹೆಣ್ಣುಮಕ್ಕಳನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ರೈನ್ ಡ್ಯಾನ್ಸ್ ಮುಖಾಂತರ ಅವರನ್ನು ಮಾರಾಟ ವಸ್ತುಗಳನ್ನಾಗಿ ಮಾಡುವಂಥಾದ್ದು, ಅಥವಾ ಕ್ಲಬ್‌ಗಳ ಪ್ರಭಾವವನ್ನು ಉಪಯೋಗಿಸಿ ಮತ್ತು ಪ್ರತಿಷ್ಠೆಯನ್ನು ಪ್ರಯೋಗಿಸುತ್ತಿದ್ದಾರೆ. ಈ ಕ್ರೈಮ್ ಏನಿದೆ ಇದನ್ನು ನಿಲ್ಲಿಸುವಂತಹದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಈ ವಿಷಯ "ಹಾಯ್ ಬೆಂಗಳೂರ್" ಪತ್ರಿಕೆಯಲ್ಲಿ ಕಳೆದ 3-4 ವಾರದಿಂದ ಬರುತ್ತಿದೆ. ಇದನ್ನು ಮಾನ್ಯ ಗೃಹ ಸಚಿವರು ಓದದೇ ಇರಬಹುದು, ಆದರೂ ಈ ಡಿಪಾರ್ಟ್‌ಮೆಂಟ್‌ನವರು ಈ ಪೇಪರ್ ಕಟ್ಟಿಂಗ್ಸ್ ಅನ್ನು ಕಳುಹಿಸುತ್ತಾರೆ. ರೀಚ್ ಫೌಂಡೇಷನ್‌ಗೆ ಸಹಾಯ ಮಾಡುವುದಕ್ಕೋಸ್ಕರ ಈ ಕ್ಲಬ್‌ಗಳು ಇವೆಯೇ? ಈ ರೀಚ್ ಫೌಂಡೇಶನ್‌ಗೆ ಸಹಾಯ ಮಾಡುವುದಕ್ಕೋಸ್ಕರ ನಮ್ಮ ಹೆಣ್ಣು ಮಕ್ಕಳು ಮಾರಾಟ ವಸ್ತುಗಳಾಗಬೇಕೇ? ರೀಚ್ ಫೌಂಡೇಷನ್‌ಗಳಿಗೋಸ್ಕರ ಇದು ಕ್ರೈಮ್ ಸಿಟಿಯಾಗಬೇಕೇ? ತಾವು ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನೂ ಸಹ ಈ ಕ್ರೈಮ್ ವಿಚಾರವಾಗಿ ಮಾತನಾಡಬೇಕೆಂದು ಇದ್ದೆ. ಮಾನ್ಯ ಸುರೇಶ್ ಕುಮಾರ್‌ರವರು ಈಗಾಗಲೇ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಬೆಂಗಳೂರಿನಲ್ಲಿ ಕ್ಲಬ್‌ಗಳ ಹಾವಳಿ ಮತ್ತು ಇದರಲ್ಲಿ ನಡೆಯುವಂತಹ ಅವ್ಯವಹಾರ ಮತ್ತು ದಂಧೆಗಳು ಏನಿವೆ. ಅದರಲ್ಲೂ ಪ್ರಮುಖವಾಗಿ ನಮ್ಮ ಬೆಂಗಳೂರು ನಗರದಲ್ಲಿರುವಂತಹ ಮಧ್ಯಮ ವರ್ಗದ ಹೆಣ್ಣುಮಕ್ಕಳು ಈ ವ್ಯಾಮೋಹಕ್ಕೆ ಬಲಿಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವರನ್ನು ಜಾಹೀರಾತು ಕಂಪನಿಯವರು ಕರೆದುಕೊಂಡು ಹೋಗುತ್ತಾರೆ, ಕ್ಲಬ್‌ನವರು ಕರೆದುಕೊಂಡು ಹೋಗುತ್ತಾರೆ, ವ್ಯಾಪಾರಸ್ಥರು ಕರೆದುಕೊಂಡು ಹೋಗುತ್ತಾರೆ. ಅವರು ಮನೆಗಳನ್ನು ಬಿಟ್ಟು ಬಂದಾಗ ಹೊರಗಡೆ ಏನೇನು ಮಾಡುತ್ತಾರೆಂಬುದು ತಂದೆತಾಯಿಗಳಿಗೆ ಏನೂ ಗೊತ್ತಾಗುವುದಿಲ್ಲ. ಇವರು ಶಾಲಾ ಕಾಲೇಜುಗಳ ಹೆಸರಿನಲ್ಲಿ ಹೊರಗಡೆ ಬರುತ್ತಾರೆ. ಇವರನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳುವಂತಹ ಶಕ್ತಿಗಳು ಇಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಿವೆ. ಇದಕ್ಕೆ ಪ್ರಮುಖವಾದ ಕಾರಣವೇನೆಂದರೆ ಈಗ ಬಂದಿರುವಂತಹ ಕನ್‌ಸ್ಯೂಮರ್ ಕಲ್ಚರ್ ಏನಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಎಸ್. ಸುರೇಶ್ ಕುಮಾರ್‌ರವರು ಬಹಳ ಗಂಭೀರವಾದಂತಹ ವಿಚಾರವನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದಾರೆ ನವೆಂಬರ್ 6ನೇ ತಾರೀಖಿನಂದು ಈ ವೆಡ್ ಶೆಡ್ಯೂಲ್ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಅದೇ ವಿಷಯವನ್ನು ಹೇಳುತ್ತಿದ್ದೇನೆ. ಶ್ರೀ ಸುರೇಶ್ ಕುಮಾರ್‌ರವರು ಉಳಿದಂತಹ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ನಾನು ಅದನ್ನೇ ಪ್ರಸ್ತಾಪ ಮಾಡುತ್ತಿದ್ದೆ.

ಅಧ್ಯಕ್ಷರು : ಈಗ ನನ್ನ ಪ್ರಾಬ್ಲಂ ಏನೆಂದರೆ ನೀವು ಜನರಲ್ಲಾಗಿ ಇಷ್ಯೂಸ್ ಮಾಡುವುದಾದರೆ ನೀವು ಮಾತನಾಡುವಾಗ ಕಂಟಿನ್ಯೂ ಮಾಡುವಿರಂತೆ ಆದರೆ ಈಗ ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೆ, ತಾವು ಅವರಿಗೆ ಅವಕಾಶವನ್ನು ಕೊಟ್ಟಿರಿ. ಈ ಕ್ರೈಮ್‌ಗೆ ಸಂಬಂಧಪಟ್ಟ ಹಾಗೆ ನಾನು ಮಾತನಾಡುತ್ತಿದ್ದೆನು.

ಅಧ್ಯಕ್ಷರು : ನೀವು ಮತ್ತೆ ಬೇರೆ ಕಡೆ ಹೋಗುವುದರಿಂದ ಸೈಡ್ ಲೈನ್ ಆಗುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅದೇ ವಿಷಯಕ್ಕೆ ಬರುತ್ತಿದ್ದೇನೆ. ನವೆಂಬರ್ 6ನೇ ತಾರೀಖಿನಂದು ಏನಾಗುತ್ತಿದೆ, ಅದೆಲ್ಲಾ ಸಂಪೂರ್ಣವಾಗಿ ತಡೆಯದೆ ಹೋದರೆ ಬೆಂಗಳೂರು ನಗರ ಇನ್ನೊಂದು ಬೊಂಬಾಯಿ ಆಗುತ್ತದೆ. ಅದಕ್ಕೋಸ್ಕರ ಇದನ್ನು ಸರ್ಕಾರ ತೀವ್ರ ಪರಿಗಣನೆಗೆ ತೆಗೆದುಕೊಂಡು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇದರ ಹಿಂದೆ ಯಾರಿದ್ದಾರೆ, ಅವರ ಹೆಸರುಗಳನ್ನು, ನಾವು ಹೇಳುವಂತಹ ಅವಶ್ಯಕತೆ ಇಲ್ಲ. ನಿಮ್ಮ ಪೋಲೀಸ್ ಇಲಾಖೆಗೆ ಎಲ್ಲಾ ಗೊತ್ತಿದೆ, ಇದನ್ನು ತಕ್ಷಣ ನಿಲ್ಲಿಸದೇ ಹೋದರೆ ಬೆಂಗಳೂರು ನಗರ ಅನಾಹುತಕ್ಕೆ ಸಿಕ್ಕಿಕೊಳ್ಳುತ್ತದೆ, ಅಪಾಯಕ್ಕೆ ಸಿಕ್ಕಿ ಕೊಳ್ಳುತ್ತದೆ, ಈಗಾಗಲೇ ಇದು ಅಪರಾಧಿಗಳ ಸ್ಥಾನವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್ ರವರು ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ನಮ್ಮ ಇಡೀ ಸಾಂಸ್ಕೃತಿಕ ಪ್ರಪಂಚಕ್ಕೆ ಲಗ್ಗೆ ಹಾಕಿರುವಂತಹ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲಾ ನಡವಳಿಕೆಗಳು ಕೂಡ ಈ ಟಿ.ವಿ. ಚಾನಲ್‌ಗಳ ಮೂಲಕ ಕೆಲವು ಸಂದರ್ಭದಲ್ಲಿ ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾಗಿ ಅಪ್ರಾಪ್ತ ವಯಸ್ಕರ ಮತ್ತು ಯಾವುದನ್ನು ಗ್ರಹಿಸಲು ಸಾಧ್ಯವಾಗದೇ ಇರುವಂತಹ ಮುಗ್ಧತೆಯ ನಡುವೆ ಈ ರೀತಿಯಾದಂತಹ ಕೃತ್ರಿಮ ವಾತಾವರಣವನ್ನು ಸೃಷ್ಟಿ ಮಾಡಿ ಲೈಂಗಿಕ ಹಗರಣದಲ್ಲಿ ತೊಡಗಿಸಿಕೊಳ್ಳುವಂಥಾದ್ದು ಮತ್ತೆ ಅವರನ್ನು ಬ್ಲಾಕ್‌ಮೇಲ್ ಮಾಡುವಂತಹ ತಂತ್ರಗಳಿಗೆ ಒಳಪಡಿಸುವಂಥಾದ್ದು ಈ ರೀತಿ ಸಗಟು ಸಂಸ್ಕೃತಿಯನ್ನು ಉದ್ದೇಶ ಪೂರ್ವಕವಾಗಿ ನಡೆಸುವಂತಹ ವಿಶ್ವವ್ಯಾಪಿಯಾದಂತಹ ಜಾಲ ಕೂಡ ಇದೆ. ನಮ್ಮ ಇಡೀ ಸಂಸ್ಕೃತಿಯನ್ನು ಬುಡಮೇಲೂ ಮಾಡುವಂತಹ ವ್ಯವಸ್ಥೆಯಿಂದ ನಮ್ಮ ದೇಶಕ್ಕೆ ಒಳಿತಾಗಲಾರದು. ಈಗ ತಾವೆಲ್ಲರೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಇದು ಅನೇಕರ ಗಮನಕ್ಕೂ ಬಂದಿದೆ. ನಾವು ಈ ದೂರದರ್ಶನವನ್ನು ಎಷ್ಟರಮಟ್ಟಿಗೆ ಉಪಯೋಗಿಸಬೇಕೆನ್ನುವುದರ ಬಗ್ಗೆ ಮರು ಚಿಂತನೆ ಮಾಡತಕ್ಕಂತಹ ವ್ಯವಸ್ಥೆ ಕೂಡ ಇದೆ. ಈ ಸಂದರ್ಭದಲ್ಲಿ ತಾವು ಪ್ರಸ್ತಾಪ ಮಾಡಿದಂತಹ "ದಿ ಕ್ಲಬ್" ಆಗಲಿ ಅಥವಾ ಬೇರೆ ಬೇರೆ ನಾಮಾಂಕಿತ ಪಡೆದಂತಹ ಕ್ಲಬ್‌ಗಳಿದ್ದರೂ ಕೂಡ ಈ ರೀತಿ ನಮ್ಮ ಸಂಸ್ಕೃತಿಗೆ ಸಂಪೂರ್ಣವಾಗಿ ವಿರೋಧವಾಗಿರುವಂತಹ ಈ ಪರಕೀಯರ ಪ್ರವೃತ್ತಿ ಏನು ಇದೆ ಅದನ್ನು ಈ ಸರ್ಕಾರ ಸಹಿಸುವುದಿಲ್ಲ. ಈ ಬಗ್ಗೆ ಅಲ್ಲಿ ಇಲ್ಲಿ ಮುಚ್ಚಿ ಹಾಕುವಂತಹ ಕೆಲಸಗಳು ಆಗಿರಬಹುದು. ಆದರೆ ಅನೇಕ ಪತ್ರಿಕೆಗಳು ಇದನ್ನು ಬರೆದಿದೆ, ಸರ್ಕಾರ ಕೂಡ ಇದನ್ನು ಖಂಡಿಸುತ್ತದೆ. ನಾನು ಈಗ ಹಿರಿಯ ಪೋಲೀಸ್ ಅಧಿಕಾರಿಯವರ ಜೊತೆಗೆ ಮಾತನಾಡಿದೆ. ಮಾನ್ಯ ಗೃಹ ಸಚಿವರೂ ಸಹ ಬರುತ್ತಾರೆ, ಅವರ ಜೊತೆಗೆ ಮಾತನಾಡಿ ಈ ದಿವಸ ಸಾಯಂಕಾಲ ಅಥವಾ ನಾಳೆ ಮಾತನಾಡಿ ಈ 6ನೇ ತಾರೀಖಿನಂದು ಉದ್ದೇಶ ಪೂರ್ವಕವಾಗಿರುವಂತಹ ಕಾರ್ಯಕ್ರಮವೇನು ಇದೆ, ಅದನ್ನು ನಿರ್ಬಂಧಿಸುವಂತಹ ವಿಚಾರದಲ್ಲೂ ಮತ್ತು ಬೇರೆ ಬೇರೆ ಕಾನೂನು ರೀತಿಯಲ್ಲಿ ಕೈಗೊಳ್ಳಬೇಕಾದಂತಹ ವಿಷಯಗಳಲ್ಲೂ ತೀರ್ಮಾನವನ್ನು ತೆಗೆದುಕೊಂಡು ನಾವು ಈ ಸದನಕ್ಕೆ ಅರಿಕೆ ಮಾಡಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದನ್ನು ಸಂಪೂರ್ಣವಾಗಿ ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕು. ಈ ವಿಚಾರವಾಗಿ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಿದೆ. ರಾಜಾಜಿನಗರದ ಕ್ಲಬ್‌ನ ಮುಂದೆ ಕೊಲೆಯಾಗಿದೆ. ಈ ಕೊಲೆಯಾಗಿರುವವರ ಬಗ್ಗೆ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಿದೆ. ಇದರ ಬಗ್ಗೆ ಇವತ್ತಿನವರೆಗೂ ಏನು ಆಗಿಲ್ಲ. ಈ ಕ್ಲಬ್‌ಗಳಿಂದ ದೊಡ್ಡ ದುರಂತಗಳು ಆಗುತ್ತಿವೆ, ಪೋಲೀಸ್ ಅಧಿಕಾರಿಗಳೇ ಸದಸ್ಯರುಗಳಾಗಿದ್ದಾರೆ, ಇದೊಂದು ಪಿಡುಗಾಗಿದ್ದು ಇದನ್ನು ತಪ್ಪಿಸಲಿಲ್ಲವೆಂದರೆ ಬೆಂಗಳೂರು ಮತ್ತೊಂದು ಭಯಾನಕ ನಗರವಾಗುತ್ತದೆ. ಇದರಲ್ಲಿ ತಾವು ಪಕ್ಷಾತೀತವಾಗಿ ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

7444-141

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಮಾತ್ರವಲ್ಲ ರಾಜ್ಯದ ಇತರ ಕಡೆಗಳಲ್ಲೂ ಕೂಡ ನಡೆಯುತ್ತಿವೆ. ಕಳೆದ ವಾರ ಮೈಸೂರಿನ "ವಿಕಾಸ ಕರ್ನಾಟಕ" ಎಂಬ ವಾರ ಪತ್ರಿಕೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಅಂಬಳಿ ರಿಸಾರ್ಟ್ ನಲ್ಲಿ ಕೂಡ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ಪಾಶ್ಚಿಮಾತ್ಯ ರೀತಿಯಲ್ಲಿ ಮಹಿಳೆಯರು, ಪುರುಷರು ಭಾಗವಹಿಸಿದ್ದಷ್ಟೇ ಅಲ್ಲ ಡ್ರಗ್ಸ್ ತೆಗೆದುಕೊಳ್ಳುತ್ತಿರುವಂತಹ ಫೋಟೋಗಳನ್ನೂ ಕೂಡ ಪತ್ರಿಕೆಯಲ್ಲಿ ಹಾಕಿದ್ದಾರೆ. ಅದೂ ಕೂಡ ನಿಲ್ಲಬೇಕೆಂದು ಹೇಳುತ್ತೇನೆ.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

(ಮುಂದುವರೆದ ಚರ್ಚೆ)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಚಾರವಾಗಿ ನಾಳೆ ತೀರ್ಮಾನ ಮಾಡಿ ಹೇಳುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನಮ್ಮದು ಏನು ತಕರಾರು ಇಲ್ಲ. ಆದರೆ ಈ ತೀರ್ಮಾನ ಸಕಾರಾತ್ಮಕವಾಗಿ ಇರಬೇಕು ಹಾಗೂ ಪರಿಣಾಮಕಾರಿಯಾಗಿ ಇರಬೇಕು, ಇಲ್ಲವೆಂದರೆ ಇದೇ ಸದನದಲ್ಲಿ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ಇನ್ನು ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿರುವವರು ಈ ಜನತಾ ದಳದವರು, ನಾನು ಅವರನ್ನು ನೇರವಾಗಿ ಕೇಳುತ್ತಿದ್ದೇನೆ. ನಿಮ್ಮ ಆಂತರಿಕ ಕಿತ್ತಾಟ ಯಾವ ಕಾರಣಕ್ಕೋಸ್ಕರವೆಂದು ನೀವು ಕರ್ನಾಟಕ ಜನತೆಗೆ ಹೇಳಬೇಕಾಗಿದೆ, ಮತ್ತು ಈ ಸದನಕ್ಕೆ ಹೇಳಬೇಕಾಗುತ್ತದೆ. ಇದು ಏಕೆ ಈ ಆಂತರಿಕ ಕಿತ್ತಾಟ? ನಿಮ್ಮಲ್ಲಿ ಏನಾದರೂ ತಾತ್ವಿಕವಾದಂತಹ ಭಿನ್ನಾಭಿಪ್ರಾಯಗಳು ಬಂದಿವೆಯೇ? ಈ ರೀತಿ ತಾತ್ವಿಕ ಭಿನ್ನಾಭಿಪ್ರಾಯಗಳು ಬಂದು ಘರ್ಷಣೆ ಬಂದಿದ್ದರೆ ನಾನು ಖಂಡಿತ ಸ್ವಾಗತ ಮಾಡುತ್ತೇನೆ. ಈ ದೇಶದಲ್ಲಿ ಆರೋಗ್ಯವಾದಂತಹ ತಾತ್ವಿಕ ವಿಚಾರದ ಮೇಲೆ ಚರ್ಚೆ ಮಾಡಬೇಕಾಗಿದೆ, ಬಿನ್ನಾಭಿಪ್ರಾಯಗಳ ಅಭಿಪ್ರಾಯಗಳು ಬರಬೇಕಾಗಿದೆ. ಇಂತಹ ಸ್ಥಿತಿ ಏನಾದರೂ ಕರ್ನಾಟಕ ರಾಜ್ಯದ ಜನತಾದಳದೊಳಗೆ ಏನಾದರೂ ಬಂದಿದೆಯಾ? ತಾತ್ವಿಕವಾದ ಭಿನ್ನಾಭಿಪ್ರಾಯಗಳು ಏನಾದರೂ ಇದೆಯಾ? ನನಗೆ ತಿಳಿದಮಟ್ಟಿಗೆ ಯಾವುದೇ ರೀತಿಯಾದಂತಹ ತಾತ್ವಿಕ ಭಿನ್ನಾಭಿಪ್ರಾಯ ನಿಮ್ಮಲ್ಲಿ ಇಲ್ಲ. ನಾನು ಹಲವಾರು ಸಂದರ್ಭದಲ್ಲಿ ಹೇಳಿದ್ದೇನೆ. ಜನತಾದಳದವರಿಗೆ ತಾತ್ವಿಕವಾದ ಭಿನ್ನಾಭಿಪ್ರಾಯ ಬರಲು ಸಾಧ್ಯವಿಲ್ಲ. ಯಾವ ಕಾರಣಕ್ಕೂ ಆಂತರಿಕ ಜಗಳ ಬರಲು ಸಾಧ್ಯವಿಲ್ಲ. ಹಾಗಾದರೆ ನೀವು ಇವತ್ತು ಉತ್ತರವನ್ನು ಹೇಳಬೇಕಾದರೆ ಯಾವು ಕಾರಣಕ್ಕಾಗಿ ಈ ಭಿನ್ನಾಭಿಪ್ರಾಯದ ಬಿಕ್ಕಟ್ಟು ಈ ಜನತಾದಳದಲ್ಲಿ ಉಂಟಾಗಿದೆ, ರಾಜಕೀಯವಾದ ಭಿನ್ನಾಭಿಪ್ರಾಯಗಳು ನಿಮ್ಮಲ್ಲಿ ಏನಾದರೂ ಇದೆಯಾ? ರಾಜಕೀಯ ಭಿನ್ನಾಭಿಪ್ರಾಯಗಳು ಬಂದು ನಿಮ್ಮಲ್ಲೇ ಏನಾದರೂ ಆಂತರಿಕ ಸಮಸ್ಯೆ ಬೆಳೆದು ಬಂದಿದೆಯಾ? ರಾಜಕೀಯ ಭಿನ್ನಾಭಿಪ್ರಾಯಗಳು ಎಂದರೆ ಇಡೀ ದೇಶದಲ್ಲಿ ಪೊಲಿಟಿಕಲ್ ಪೋಲರೈಜೇಷನ್ ಆಗಬೇಕಾಗಿದೆ. ಯಾವ್ಯಾವ ಶಕ್ತಿಗಳ ಮಧ್ಯೆ ಪೋಲರೈಜೇಷನ್ ಆಗಬೇಕಾಗಿದೆ. ಒಂದು ಜಾತ್ಯಾತೀತ ಶಕ್ತಿಗಳ ಮತ್ತು ಕೋಮು ಶಕ್ತಿಗಳ ಮಧ್ಯೆ ಪೋಲರೈಜೇಷನ್ ಈ ದೇಶದಲ್ಲಿ